**<u>ಸಾಕ್ಷಿಯನ್ನು ಪ್ರಮಾಣ ವಚನ ಬೋದಿಸಲಾದ ದಿನಾಂಕಃ 27-09-2023.</u>**

**<u>ಪಾಟೀ ಸವಾಲುಃ 1 ರಿಂದ 7 ನೇ ಪ್ರತಿವಾದಿ ಪರ ಶ್ರೀ.ಜಿ ಆರ್ ಕೆ ವಕೀಲರಿಂದಃ</u>**

1. ನಾನು ಡಿ ಎಡ್ ಪದವಿದರೆ. ಈ ದಾವೆಯನ್ನು ನಮ್ಮ ಕುಟುಂಬಕ್ಕೆ ಸೇರಿದ ಸುರಾಪೂರ ಗ್ರಾಮದ ಜಮೀನುಗಳ ಕುರಿತು ಹೂಡಿದ್ದೆನೆ. ದಾವಾ ಜಮೀನು ಸರ್ವೆ ನಂ.146 ರಲ್ಲಿ ಹಿಸ್ಸಾ ಆಗಿಲ್ಲ. ಆರ್ ಎಸ್ ನಂ.146 ಒಟ್ಟು ಜಮೀನು 21 ಎಕರೆ ಇತ್ತು. ಈಗಿನ ಉತಾರದಲ್ಲಿ ಆರ್ ಎಸ್ ನಂ.146 ಜಮೀನು ಪ್ರತಿವಾದಿ ನಂ.1, 6 ಮತ್ತು 7 ರವರ ಹೆಸರಿನಲ್ಲಿ ಇದೆ. ಪ್ರತಿವಾದಿ ನಂ.1, 6 ಮತ್ತು 7 ರವರು ತಮ್ಮ ಹೆಸರುಗಳಲ್ಲಿ ದಾವಾ ಆಸ್ತಿಯನ್ನು ಯಾವ ಆಧಾರದ ಮೇರೆಗೆ ವರ್ಗಾಯಿಸಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಅಸಲ ದಾವಾ ನಂ.210/13 ದಾವೆಯನ್ನು ನನ್ನ ತಾಯಿ ಸಲ್ಲಿಸಿದ್ದರು. ಸದರಿ ದಾವೆಯಲ್ಲಿ ಈ ದಾವೆಯ ಎಲ್ಲಾ ಪ್ರತಿವಾದಿಯರು ಪಕ್ಷಗಾರರು ಆಗಿದ್ದರು ಎಂದರೆ ನಿಜ. ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರ ಮಾಡಿರಲಿಲ್ಲ ಎಂದರೆ ನಿಜ. ಸದರಿ ದಾವೆಯಲ್ಲಿ ನಿಮ್ಮನ್ನು ಪಾರ್ಟಿ ಮಾಡದೆ ಇರುವ ಕಾರಣ ನಿಮ್ಮ ತಾಯಿಗೆ ವಿಚಾರಿಸಿದ್ದಿರಾ ಎಂದರೆ ಸಾಕ್ಷಿಯು ನಾನು ನಮ್ಮ ತಂದೆ ತಾಯಿ ಇಚ್ಚೆ ವಿರುದ್ಧ ಮದುವೆ ಆಗಿದ್ದೆ ಆದ್ದರಿಂದ ನಮ್ಮ ನಡುವೆ ಮಾತುಕತೆ ಇರಲಿಲ್ಲ ಎಂದು ಹೇಳುತ್ತಾರೆ. ಅಸಲು ದಾವೆ 210/2013 ರ ವಿಚಾರ ನನಗೆ ತಿಳಿದಿತ್ತು. ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರ ಮಾಡಿ ಎಂದು ಅರ್ಜಿ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ. ಸದರಿ ದಾವೆಯಲ್ಲಿ ಏನು ಆದೇಶ ಆಗಿದೆ ಎಂದು ತಿಳಿದುಕೊಂಡಿಲ್ಲ.

2. ನಾನು ಬೆಳಗಾವಿಯಲ್ಲಿ ವಾಸ ಇದ್ದೆನೆ. ಈ ದಾವೆಯಲ್ಲಿ ನಮ್ಮ ತಾಯಿ ಸಹೋದರನನ್ನು ಪಕ್ಷಗಾರನಾಗಿ ಮಾಡಿಲ್ಲ ಎಂದರೆ ನಿಜ. ವಾದಿ ನಂ.2 ತನ್ನ ಹಿರಿಯ ಸೊಸೆ-ಪ್ರತಿವಾದಿ ನಂ.1 ರ ಬಳಿ ಬೆಳಗಾವಿಯಲ್ಲಿ ವಾಸ ಇದ್ದಾರೆ. ವಾದಿ ನಂ.2 ರವರು ಈಗ ಸುಮಾರು 5-6 ತಿಂಗಳಿನಿಂದ ಪ್ರತಿವಾದಿ ನಂ.1 ರ ಬಳಿ ಬೆಳಗಾವಿಯಲ್ಲಿ ವಾಸ ಇದ್ದಾರೆ. ವಾದಿ ನಂ.2 ಪ್ರತಿವಾದಿ ನಂ.1 ರ ಬಳಿ ವಾಸ ಇರುವದಕ್ಕಿಂತ ಮುಂಚೆ ನನ್ನ ಬಳಿ ವಾಸ ಇದ್ದರು. ವಾದಿ ನಂ.2 ರವರಿಗೆ ಪ್ರತಿವಾದಿ ನಂ.1, 6 ಮತ್ತು 7 ರವರ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಲು ನಾನು ಪ್ರಚೋದನೆ ಮಾಡಿದ್ದೆ ಎಂದರೆ ಸರಿಯಲ್ಲ. ಸದರಿ ಜೀವನಾಂಶ ಕೋರಿ ಸಲ್ಲಿಸಿದ ಅರ್ಜಿಯು ಬೆಳಗಾವಿಯ ಕೌಟುಂಬಿಕ ನ್ಯಾಯಾಲಯದಲ್ಲಿ ಚಾಲ್ತಿ ಇದೆ.

3. ವಾದಿ ನಂ.2 ರವರ ಹೆಸರಿನಲ್ಲಿ ಎರಡು ಎಕರೆ ಜಮೀನು ಸರ್ವೆ ನಂ.146 ರಲ್ಲಿ ಮಂಜೂರು ಆಗಿದ್ದು ವಾದಿ ನಂ.2 ರವರು ಸದರಿ ಜಮೀನಿನ ಸ್ವಾ ಧೀನದಲ್ಲಿ ಇದ್ದಾರೆ ಎಂದರೆ ನಿಜ. ವಾದಿ ನಂ.2 ರವರು ಪ್ರತಿವಾದಿ ನಂ.8 ರವರಿಗೆ ಸದರಿ ಎರಡು ಎಕರೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿಲ್ಲ ವಾದಿ ನಂ.2 ರವರ ಬಳಿ ಹಣ ಇರಲಿಲ್ಲ. ಆ ಸಮಯದಲ್ಲಿ ಪ್ರತಿವಾದಿ ನಂ.8 ರವರು ಅವರಿಗೆ ಹಣ ಕೊಟ್ಟು ಸಹಕಾರ ಮಾಡಿ ಖರೀದಿ ಪತ್ರ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಎರಡು ಎಕರೆ ಜಮೀನಿನ ಉತಾರ ಈಗ ಪ್ರತಿವಾದಿ ನಂ.10 ಮತ್ತು 11 ರವರ ಹೆಸರಿನಲ್ಲಿ ಇದೆ. ವಾದಿ ನಂ.2, ಪ್ರತಿವಾದಿ ನಂ.10 ಮತ್ತು 11 ರವರ ಹೆಸರಿನಲ್ಲಿ ದಾನ ಪತ್ರ

ಮಾಡಕೊಟ್ಟಿದ್ದಾರೆ. ಸದರಿ ಎರಡು ಎಕರೆ ಜಮೀನು ದಾನ ಪತ್ರ ಮಾಡಿಕೊಟ್ಟಿರುವ ವಿಚಾರ ಈ ದಾವೆಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ಈ ಆಸ್ತಿಗೆ ಸಂಬಂಧಪಟ್ಟಿಲ್ಲ ಆದ್ದರಿಂದ ನಮೂದಿಸಿಲ್ಲ ಎಂದು ಹೇಳುತ್ತಾರೆ. ನಾನು ಪ್ರತಿವಾದಿ ನಂ.10 ಮತ್ತು 11 ರವರು ಶಾಮಿಲಾಗಿ ಸರ್ವೆ ನಂ.146 ಆಸ್ತಿಗೆ ಸೇರಿದ 2 ಎಕರೆ ಜಮೀನಿನ ದಾನ ಪತ್ರ ಸೃಷ್ಟಿ ಮಾಡಿಕೊಂಡಿದ್ದೆವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.10 ಮತ್ತು 11 ರವರಿಗೆ ವಾದಿ ನಂ.2 ರವರು ನೀವು ಖೊಟ್ಟಿ ದಾನ ಪತ್ರ ಮಾಡಿಕೊಂಡಿದ್ದಿರಿ ಹಾಗೂ ನನ್ನನ್ನು ನೋಡಿಕೊಳ್ಳುತ್ತಿಲ್ಲ ದಾನ ಪತ್ರ ರದ್ದು ಮಾಡಿಸಲು ಹೇಳಿದ್ದರಿಂದ ನಾನು ಪ್ರತಿವಾದಿ ನಂ.10 ಮತ್ತು 11 ಶಾಮಿಲಾಗಿ ವಾದಿ ನಂ.2 ರವರನ್ನು ಮನೆಯಿಂದ ಹೊರಗೆ ಹಾಕಿದ್ದೆವು ಎಂದರೆ ಸರಿಯಲ್ಲ.

4. ನಾನು, ವಾದಿ ನಂ.2 ಮತ್ತು ಪ್ರತಿವಾದಿ ನಂ.1 ರಿಂದ 11 ಒಂದೇ ಕುಟುಂಬದ ಸದಸ್ಯರು. ನಮ್ಮ ತಂದೆ ಹಾಗೂ ಅವರ ಸಹೋದರ ರವೀಂದ್ರ ಬೊಗಲೆ ರವರ ನಡುವೆ ಕಲ್ಮೇಶರ ಸೊಸೈಯಿಟಿ ಬೆಳಗಾವಿಯಲ್ಲಿಯ ಆಸ್ತಿ, ಎಚ್ ಎಸ್ ಆರ್ ಲೆಔಟ ಬೆಂಗಳೂರಿನ ಆಸ್ತಿ, ಬೆಳಗಾವಿಯ 3 ನೇ ರೆಲ್ವೆ ಗೇಟ ಬಳಿ ಇರುವ ಸಿ.ಟಿ.ಎಸ್. ಆಸ್ತಿಯಲ್ಲಿ ಈಗಾಗಲೆ ಪಾಲು ಆಗಿದೆ ಎಂದರೆ ನಿಜ. ಸದರಿ ಆಸ್ತಿಗಳ ಕುರಿತು ದಾವೆ ಆಗಿದ್ದು, ದಾವೆಯು ಡಿಕ್ರಿಯಾಗಿ, ಅಂತಿಮ ಡಿಕ್ರಿ ಸಹ ಆಗಿ ಕಮಿಷನರ ನೇಮಕಗೊಂಡು ಪಾಲಿನ ಪ್ರಕಾರ ಆಸ್ತಿಗಳನ್ನು ವಿಭಜನೆ ಮಾಡಿ ಸದರಿ ಅಂತಿಮ ಡಿಕ್ರಿ ಅರ್ಜಿ ಸಹ ಮುಕ್ತಾಯಗೊಂಡಿದೆ ಎಂದರೆ ನಿಜ. ಬೆಳಗಾವಿಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ದಾವೆಯಲ್ಲಿ ಮತ್ತು ಅಂತಿಮ

ಡಿಕ್ರಿ ಅರ್ಜಿಯಲ್ಲಿ ಸರ್ವೆ ನಂ.146/3 ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಅಲ್ಲದೆ ಇರುವುದರಿಂದ ಅದನ್ನು ಸೇರಿಸಿರಲಿಲ್ಲ ಎಂದರೆ ಸಾಕ್ಷಿಯು ಸೇರಿಸಲಾಗಿದೆ ಎಂದು ಹೇಳುತ್ತಾರೆ. ಸರ್ವೆ ನಂ.146/3 ಆಸ್ತಿ ಬೆಳಗಾವಿಯ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆ ಮತ್ತು ಅಂತಿಮ ಡಿಕ್ರಿ ಅರ್ಜಿಯಲ್ಲಿ ಸೇರಿಸಲಾಗಿತ್ತು ಎಂದು ತೋರಿಸಲು ನಾನು ದಾಖಲೆಯನ್ನು ಹಾಜರು ಮಾಡಿದ್ದೆನೆ. ಬೆಳಗಾವಿಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ದಾವೆಯಲ್ಲಿ ಮತ್ತು ಅಂತಿಮ ಡಿಕ್ರಿ ಅರ್ಜಿಯಲ್ಲಿ ಸರ್ವೆ ನಂ.146/3 ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಅಲ್ಲದೆ ಇರುವುದರಿಂದ ಅದನ್ನು ಸೇರಿಸಿರಲಿಲ್ಲ ನಾನು ಸೇರಿಸಲಾಗಿದೆ ಎಂದು ದಾಖಲೆ ಹಾಜರು ಮಾಡಿದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಬಿಡಿ ಗ್ರಾಮದಲ್ಲಿ ಆರ್ ಟಿ ಎಸ ಅರ್ಜಿ ಸಲ್ಲಿಸಲಾಗಿತ್ತು ಅದನ್ನು ಪ್ರತಿವಾದಿ ನಂ.10 ಮತ್ತು 11 ರವರು ಸಲ್ಲಿಸಿದ್ದರು ಆದರೆ ಅರ್ಜಿಯ ಪೂರ್ಣ ಮಾಹಿತಿ ನನಗೆ ಇಲ್ಲ.

ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**